# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
# ಹಿರಿಯಶ್ರೇಣಿ, ತೀರ್ಥಹಳ್ಳಿ
# ಸಿ.ಸಿ. ನಂ. 473/2024

| | | |
|---|---|---|
| ಸಾಕ್ಷಿದಾರರ ಹೆಸರು | ಆದರ್ಶ ಎ.ಪಿ. | |
| ತಂದೆಯ ಹೆಸರು | ಪರಮೇಶ್ವರ | ಸಿಡಬ್ಲ್ಯೂ-18 |
| ವಯಸ್ಸು | 39 ವರ್ಷ | ಪಿಡಬ್ಲ್ಯೂ-6 |
| ಉದ್ಯೋಗ | ಹೆಚ್.ಸಿ 371, ಆಗುಂಬೆ ಪೊಲೀಸ್ ಠಾಣೆ | |
| ವಾಸಸ್ಥಳ | ಆಗುಂಬೆ | |

ದಿಃ 04-08-2026 ರಂದು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿಃ26-08-2021 ರಿಂದ ಆಗುಂಬೆ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ಮಾಡುತ್ತಿದ್ದೇನೆ.

ದಿಃ31-03-2024 ರಂದು ರಾತ್ರಿ 10.15 ಗಂಟೆಗೆ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರು, ಅಮಾನತ್ತು ಪಂಚನಾಮೆ ಹಾಗೂ ಸ್ವತ್ತನ್ನು ಸ್ವೀಕರಿಸಿಕೊಂಡು ದೂರಿನ ಆಧಾರದ ಮೇರೆಗೆ ಠಾಣಾ ಗುನ್ನೆ ನಂ.25/2024 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಇಲಾಖಾ ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಸ್ವತ್ತನ್ನು ಠಾಣಾ ಪಿಎಫ್ ನಂ.25/2024 ರಂತೆ ನೊಂದಾಯಿಸಿ ಎಫ್ ಎಸ್ ಎಲ್ ಕಳುಹಿಸಲು ನ್ಯಾಯಾಲಯದಿಂದ ಅನುಮತಿ ಕೋರಿರುತ್ತೇನೆ. ದಾಳಿಯಲ್ಲಿ ಭಾಗವಹಿಸಿದ ಪಂಚರುಗಳ ಹಾಗೂ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ01-04-2024 ರಂದು ಚಾಸಾ-6 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ತೀರ್ಥಮುತ್ತೂರು ಪಿಡಿಒ ರವರಿಗೆ ಮನವಿಯನ್ನು ನೀಡಿರುತ್ತೇನೆ. ಚಾಸಾ--19 ರವರ ಮೌಖಿಕ ಆದೇಶದ ಮೇರೆಗೆ ಕಡತವನ್ನು ಮುಂದಿನ ತನಿಖೆಗಾಗಿ ಸದರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-1 ದೂರನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ-1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಚಾಸಾ-16 ರವರಿಗೆ ಸ್ಥಳದ ದಾಖಲಾತಿಯನ್ನು ನೀಡಲು ನೀಡಿದ ಕೋರಿಕೆ ಪತ್ರವನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ LVM ವಕೀಲರಿಂದ**

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಮತ್ತು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಸಿಬ್ಬಂದಿಗಳ ಹೇಳಿಕೆಗಳನ್ನು ದಾಖಲೆ ಮಾಡಿರುತ್ತೇನೆ. ಅವರ ಹೆಸರುಗಳು ವಿನಯ್ ಕುಮಾರ್, ನಿಷಾ ಕೆ.ಜಿ., ಸುದರ್ಶನ್ ಮತ್ತು ಗಣೇಶ್ ಹಾಗೂ ನಂದನ್ ಆಗಿರುತ್ತದೆ. ಸದರಿ ಹೇಳಿಕೆಗಳಿಗೆ ಠಾಣೆಯ ಮೊಹರನ್ನು ಮಾಡಿ ನನ್ನ ಸಹಿ ಮಾಡಿರುತ್ತೇನೆ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಸುಳ್ಳು ಹೇಳಿಕೆಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ರೈಡ್ ಆಫೀಸರ್ ಹಾಗೂ ಚಾಸಾ-19 ರವರು ಇನ್ವೆಸ್ಟಿಗೇಶನ್ ಆಫೀಸರ್ ಆಗಿರುತ್ತಾರೆ. ಆರೋಪಿಯ ಯಾವುದೇ ತಪ್ಪಿಲ್ಲದಿದ್ದರೂ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನಾನು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಎಸ್ಐ ರವರಿಗೆ ಯಾವುದೇ ದೂರನ್ನು ನೀಡಿದೇ ಅದು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ತೆ ನ್ಯಾ ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**